ನಿ:72 = 28
15ನೇ4

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಪ್ರಶ್ನೆ:**

ಕೋಲಾರ ಜಿಲ್ಲೆಯಲ್ಲಿರುವ ಹಲವಾರು ಜಮೀನಿನ ಮಾಲೀಕರು ತಮ್ಮ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿಕೊಂಡು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಏಕ ನಿವೇಶನ ವಿನ್ಯಾಸ ನಕ್ಷೆಗಳನ್ನು ಕಾನೂನುಬದ್ಧವಾಗಿ ಅನುಮತಿ ಪಡೆದುಕೊಂಡು, ಗ್ರಾಮ ಪಂಚಾಯಿತಿ ಯಿಂದಲೂ ಇ-ಖಾತಾಗಳನ್ನು ಮಾಡಿಸಿಕೊಂಡು ಸರ್ಕಾರಕ್ಕೆ ಕಟ್ಟಬೇಕಾಗಿರುವ ತೆರಿಗೆಗಳನ್ನು ಪಾವತಿ ಮಾಡುತ್ತಿರುವ ಜಮೀನಿನ ಮಾಲೀಕರಿಗೆ ಕೆಐಡಿಬಿ ಯಿಂದ ಜಮೀನಿನ ಮಾಲೀಕರಿಗೆ ನೋಟೀಸ್ ಜಾರಿಮಾಡಿ ಸದರಿ ಜಮೀನಿನಲ್ಲಿ ಅನಧಿಕೃತ ಕಟ್ಟಡಗಳನ್ನು ನಿರ್ಮಿಸದಂತೆ ಒತ್ತಡ ಹಾಕಲಾಗುತ್ತಿರುವ ವಿಷಯವನ್ನು ಮಾನ್ಯ ಬೃಹತ್ ಕೈಗಾರಿಕಾ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕುರುಗಲ್ ಗ್ರಾಮದ ಸರ್ವೆ ನಂ.20/1 ರಲ್ಲಿ 0-17.08 ಎಕರೆ, 20/2ರಲ್ಲಿ 0-35 ಗುಂಟೆ, 20/3 ರಲ್ಲಿ 0-37 ಗುಂಟೆ, 20/4 ರಲ್ಲಿ 0-16.12 ಗುಂಟೆ, 20/5 ರಲ್ಲಿ 0-24 ಗುಂಟೆ, 20/7 ರಲ್ಲಿ 0-21 ಗುಂಟೆ, 20/8 ರಲ್ಲಿ 0-21 ಗುಂಟೆ, 20/9 ರಲ್ಲಿ 0-35 ಗುಂಟೆ, 20/11 ರಲ್ಲಿ 0-14.04 ಗುಂಟೆ, 20/14 ರಲ್ಲಿ 0-17.08 ಮತ್ತು 20/15 ರಲ್ಲಿ 0-24 ಗುಂಟೆ ಜಮೀನುಗಳನ್ನು ಸರ್ಕಾರದ ಅಧಿಸೂಚನೆ ಕಲಂ 28(1) ರ ಸಂಖ್ಯೆ: ಸಿಐ 156 ಎಸ್.ಪಿ.ಕ್ಯೂ(ಇ) 2020, ದಿನಾಂಕ:12-08-2020 ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಮೇಲ್ಕಂಡ ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ಸರ್ಕಾರದ ಪತ್ರ ಸಂಖ್ಯೆ: ಸಿಐ 156 ಎಸ್.ಪಿ.ಕ್ಯೂ(ಇ) 2020, ದಿನಾಂಕ: 24-06-2022 ರಂತೆ ಸದರಿ ಜಮೀನುಗಳನ್ನು ಪರಿಶೀಲನೆಗಾಗಿ ಕಾಯ್ದಿರಿಸಲಾಗಿರುತ್ತದೆ.

ಸರ್ವೆ ನಂ.20/6 ರಲ್ಲಿನ 0-22 ಗುಂಟೆ ಜಮೀನಿನ ಭೂಮಾಲೀಕರು ರಿಟ್ ಅರ್ಜಿ ಸಂಖ್ಯೆ:14208/2023 ರಲ್ಲಿ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತಮ್ಮ ಜಮೀನು ಭೂಸ್ವಾಧೀನವಾಗಿದ್ದು, ಉಳಿದ ಜಮೀನುಗಳು ಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಟ್ಟಿರುವ ಬಗ್ಗೆ ದಾವೆ ದಾಖಲಿಸಿರುತ್ತಾರೆ.

ಈ ಬಗ್ಗೆ ದಿನಾಂಕ:05.02.2024 ರ ಪತ್ರದಲ್ಲಿ ಮಂಡಳಿ ವಕೀಲರು ಸದರಿ ವಿಷಯವನ್ನು ಮಂಡಳಿ ಗಮನಕ್ಕೆ ತಂದು ಸರ್ಕಾರವು ಪರಿಶೀಲನೆ ಮಾಡಲು ತಿಳಿಸಿರುವ ಸರ್ವೆ ನಂಬರುಗಳಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದಾಗಿ ತಿಳಿಸಿ ಸದರಿಯವರಿಗೆ ನೋಟಿಸ್ ನೀಡಲು ಸೂಚಿಸಿದ ಮೇರೆಗೆ ದಿನಾಂಕ: 13-09-2024 ರಂದು ಮೇಲೆ ತಿಳಿಸಿದ ಹಾಗೂ ಸರ್ಕಾರವು ಪರಿಶೀಲನಾ ಹಂತದಲ್ಲಿರಿಸಿದ ಜಮೀನುಗಳ ಸರ್ವೆ ನಂಬರುಗಳ ಭೂಮಾಲೀಕರುಗಳಿಗೆ ಯಾವುದೇ ರೀತಿಯ ಅನಧಿಕೃತ ಕಾಮಗಾರಿಗಳನ್ನು

ಕೈಗೊಂಡಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದೆಂದು ವಿಶೇಷ ಭೂಸ್ವಾಧೀನಾಧಿಕಾರಿಯವರು ನೋಟಿಸ್ ನೀಡಿರುತ್ತಾರೆ.

ಆದ್ದರಿಂದ ಸರ್ಕಾರದ ಸೂಚನೆಯಂತೆ ಪ್ರಸ್ತಾವಿತ ಸರ್ವೆ ನಂಬರುಗಳ ವಿಸ್ತೀರ್ಣದ ಜಮೀನುಗಳನ್ನು ಸ್ಥಳ ತನಿಖೆ ಮಾಡಿ ಮತ್ತೊಮ್ಮೆ ಪರಿಶೀಲಿಸಿ, ಬಳಿಕ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

**ಸಂಖ್ಯೆ:ಸಿಐ 534 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ**
**ಮೂಲಸೌಲಭ್ಯ ಅಭಿವೃದ್ದಿ ಸಚಿವರು**